ದಿನಾಂಕಃ **11-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ,**

1) ನನ್ನ ತಂದೆಗೆ ನಾಲ್ಕು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನಾನು ವಾದಿಯ ವಿರುದ್ಧ ಬೇರೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಂಜೇಗೌಡ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ತಾಯಿ ಮತ್ತು ಈ ದಾವೆಯ ಪ್ರತಿವಾದಿ ಅನಿಫ್‌ಕುಮಾರ್ ಓ ಎಸ್ 508/2017 ರಂತೆ ವಿಭಾಗ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಜಮೀನು ವಿಭಾಗಕ್ಕಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರಸನ್ನ ಕುಮಾರ್ ಜಿ ಎಂದರೆ ನಾನೇ ಆಗಿರುತ್ತೇನೆ. ನಾನು ನಿಡಿ 1 ರಂತೆ ಜಯಮ್ಮ ರವರ ವಿರುದ್ಧ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 4 ವಾದಪತ್ರ ನಾನೇ ಹಾಜರುಪಡಿಸಿರುತ್ತೇನೆ. ನಿಡಿ 4 ವಾದಪತ್ರ ಯಾವ ಪರಿಹಾರ ಕೋರಿ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

2) ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಸರ್ವೆ ನಂ. 111/2 ರಲ್ಲಿ ನಾಲ್ಕು ಎಕರೆ 20 ಗುಂಟೆ ವಿಸ್ತೀರ್ಣ ಇದೆ ಎಂದರೆ ಸರಿ. ಸದರಿ ಸರ್ವೆ ನಂಬರಿನ ಖಾತೆ ನಿಡಿ 6 ರ ಪಹಣಿಯಂತೆ ಗೋವಿಂದೇಗೌಡರವರ ಹೆಸರು ಖಾತೆದಾರರ ಕಾಲಂ ನಲ್ಲಿ ಇದೆ ಎಂದರೆ ಸರಿ. ವಾದಿಗೆ ಕರಾರು ಪತ್ರ ಆಗುವ ಕಾಲಕ್ಕೆ ಸರ್ವೆ ನಂ. 111/2 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಗೋವಿಂದೇಗೌಡರ ಹೆಸರಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಗೋವಿಂದೇಗೌಡರಿಗೆ ಸದರಿ ಆಸ್ತಿ ಹಕ್ಕು ಬಿಡುಗಡೆ ಪತ್ರದ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ತಾಯಿ

ಗೋವಿಂದೇಗೌಡರಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಯಾವ ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ.

3) ನನ್ನ ಸಹೋದರ ಅನಿಫ್ ಕುಮಾರ್ ರವರು ಈ ಹಿಂದೆ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಆಗಿದ್ದರು ಎಂದರೆ ಸರಿಯಲ್ಲ. ನನ್ನ ಸಹೋದರ ಗೋವಿಂದೇಗೌಡ ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದರು ಎಂದರೆ ಸರಿಯಲ್ಲ. ಗೋವಿಂದೇಗೌಡ ಮತ್ತು ಅನಿಫ್ ಕುಮಾರ್ ರವರು ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದರು ಎಂಬ ಬಗ್ಗೆ ತಹಸೀಲ್ದಾರ್ ರವರು ದೃಡೀಕರಣ ಪತ್ರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸರ್ವೆ ನಂ. 111/6 ರಲ್ಲಿ 16 ಗುಂಟೆ, ಸರ್ವೆ ನಂ. 06/1 ರಲ್ಲಿ 20 ಗುಂಟೆ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ಈಗ ಜೀವಂತ ಇರುವುದಿಲ್ಲ. ನನ್ನ ತಾಯಿ ಸರ್ವೆ ನಂ. 6 ರಲ್ಲಿ 21 ಗುಂಟೆ, ಸರ್ವೆ ನಂ.111/9 ರಲ್ಲಿ 4 ಎಕರೆ 20 ಗುಂಟೆ ಮತ್ತು 301/9 ರಲ್ಲಿ 16 ಗುಂಟೆ ಆಸ್ತಿಯನ್ನು ನನ್ನ ತಾಯಿ ಗೋವಿಂದೇಗೌಡರಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಡಲು ಹಕ್ಕು ಘೋಷಣೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನಸೂಚಿ ಸ್ವತ್ತುನ್ನೂ ಸಹ ನನ್ನ ತಾಯಿ ಗೋವಿಂದೇಗೌಡರಿಗೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮೇಲ್ಕಂಡ ವಿಚಾರಗಳು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ನಾನು ಮತ್ತು ನನ್ನ ಕುಟುಂಬದ ಸದಸ್ಯರು ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ವಾದಿಗೆ 14,50,000/- ಹಣದ ಪ್ರತಿಫಲಕ್ಕಾಗಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರೀ ಕರಾರು ಪತ್ರದ ಅಡಿಯಲ್ಲಿ 14 ಲಕ್ಷ ಮುಂಗಡ ಹಣವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಸಹೋದರ್ ಅನಿಫ್ ಕುಮಾರ್ ರವರ ಚಿತಾವಣೆ ಮೇರೆಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದ ವ್ಯವಹಾರವನ್ನು ನನ್ನ ತಾಯಿ

ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಾನು ಒಟ್ಟು ಕುಟುಂಬದಿಂದ ಬೇರೆ ಆಗಿರುತ್ತೇನೆ. ನಾನು ಒಟ್ಟು ಕುಟುಂಬದಿಂದ ಬೇರೆ ಆಗಿರುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ಒಟ್ಟು ಕುಟುಂಬದ ಅವಶ್ಯಕತೆಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಲು ನನ್ನ ತಾಯಿ ಒಟ್ಟು ಕುಟುಂಬದ ಪರವಾಗಿ ಒಪ್ಪಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಈ ದಾವೆ ಸಲ್ಲಿಸಿದ ನಂತರ ಓ ಎಸ್ ನಂ. 35/19 ರಂತೆ ವಿಭಾಗ ಕೋರಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ದಾವೆಯಲ್ಲಿ ದಾವಾ ಸ್ವತ್ತನ್ನು ಸಹ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.